# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 255 | Pages. 2 | Date: 23-08-2025, SATURDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 255 – ಪುಟಗಳು : 2 23-08-2025 ಶನಿವಾರ | Ph: 8762954248 | ದರ : ₹1


# ಹೈಕೋರ್ಟ್ ವಜಾ ಮಾಡಿದ ಕೇಸ್‌ಗೆ ಮೇಲ್ಮನವಿ

## ಆಸ್ತಿ ವಿವರ ಮುಚ್ಚಿಟ್ಟ ಪ್ರಕರಣ : ಕಾನೂನಿಗೆ ತಲೆ ಬಾಗುವೆ ಎಂದ ಸಂಸದ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಚುನಾವಣೆ ವೇಳೆ ಆಸ್ತಿ ವಿವರ ಮುಚ್ಚಿಟ್ಟ ಆರೋಪ ಸಂಬಂಧ ನನ್ನ ವಿರುದ್ಧ ದಾಖಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿದ್ದು ಕಾನೂನಿಗೆ ನಾನು ತಲೆಬಾಗುತ್ತೇನೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಜೆಡಿಎಸ್ ಮುಖಂಡ ಪೂರ್ಣಚಂದ್ರ ಅವರು ಸುಪ್ರೀಂ ಕೋರ್ಟ್ ನೋಟಿಸ್ ಜಾರಿಯಾದ ಸಂಬಂಧ ತಮ್ಮ ಕಚೇರಿಗೆ ನೋಟಿಸ್ ಅಂಟಿಸಿದ ಪ್ರಕರಣದ ಕುರಿತು ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿ, 2024ರ ಜುಲೈ 18ರಂದು ಹೈಕೋರ್ಟ್‌ನಲ್ಲಿ ಫೈಲ್ ಮಾಡಿದ ಅರ್ಜಿ ವಜಾ ಆಗಿದೆ. ಆಗ ನಾನು ಗೆದ್ದೆ ಗೆದ್ದೆ ಎಂದು ಪ್ರಚಾರ ಮಾಡಿಕೊಳ್ಳಬಹುದಿತ್ತು. ಈಗ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಅದನ್ನು ಪ್ರಚಾರಕ್ಕೆ ಬಳಸುವುದು ಸರಿಯಲ್ಲ. ಮಾಧ್ಯಮದವರು ಇದ್ದಾರೆಂದು ಪ್ರಚಾರಕ್ಕಾಗಿ ಹಾತೊರೆಯಬಾರದು ಎಂದರು.



ಕೋರ್ಟ್‌ನಲ್ಲಿ ಗೆದ್ದು ಬಂದರೆ ನನ್ನನ್ನು ಕೇಳಲಿ. ಇಲ್ಲದೇ ಮಾಧ್ಯಮದ ಮುಂದೆ ಕ್ರಿಯೇಟ್ ಮಾಡಿ ಪ್ರಚಾರ ಮಾಡುವುದು ಕಾನೂನು ಬಾಹಿರ, ಅಸಂವಿಧಾನಿಕ. ನ್ಯಾಯಕ್ಕೆ ಎಲ್ಲರೂ ತಲೆಬಾಗಬೇಕು. ಹೈಕೋರ್ಟ್ ವಜಾ ಮಾಡಿದ ಕಾರಣವೇ ಆ ಪ್ರಕರಣದಲ್ಲಿ ಹುರುಳಿಲ್ಲ ಎಂಬುದಾಗಿತ್ತು ಎಂದರು.

ನನಗೆ ಯಾವುದೇ ನೋಟಿಸ್ ಬಂದಿಲ್ಲ. ಕೋರ್ಟ್ ಸಿಬ್ಬಂದಿ, ಹಮೀನರು ಬಂದು ಕೊಡಬೇಕು. ನಾನು ವಕೀಲರನ್ನು ನಿಯೋಜನೆ ಮಾಡುತ್ತೇನೆಂದರು.

ಜನರು ಆಶೀರ್ವಾದ ಮಾಡಿದ್ದಾರೆ, ಜಿಲ್ಲೆ ಅಭಿವೃದ್ಧಿ ನನಗೆ ಮುಖ್ಯ. ಮೂರು ದಿನಕ್ಕೊಮ್ಮೆ ಪ್ರೆಸ್ ಮೀಟ್ ಮಾಡೋದು ನನ್ನ ಧ್ಯೇಯವಲ್ಲ. ನಾನು ಕೆಲಸ ಮಾಡ್ತಿದ್ದೇನೆ ಎಂದರು.

### ಸಂಸದರಿಗೆ ನೋಟಿಸ್ ಕೊಟ್ಟ ಸುಪ್ರೀಂ

ಲೋಕಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸುವ ವೇಳೆ ಸಂಸದ ಶ್ರೇಯಸ್ ಪಟೇಲ್ ಅವರು ಆಸ್ತಿ ವಿವರ ಮರೆಮಾಚಿದ್ದಾರೆ ಎಂಬ ಆರೋಪ ಸಂಬಂಧ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಕೈಗೆತ್ತಿಕೊಂಡಿದೆ.

> ಧರ್ಮಸ್ಥಳ ವಿಚಾರವಾಗಿ ಎಸ್‌ಐಟಿ ತನಿಖೆ ನಡೆಯುತ್ತಿದೆ. ನನಗಂತೂ ವೈಯುಕ್ತಿಕವಾಗಿ ಧರ್ಮಸ್ಥಳದ ಬಗ್ಗೆ ತುಂಬಾ ಗೌರವವಿದೆ. ಧರ್ಮಸ್ಥಳದ ಧರ್ಮಾಧಿಕಾರಿಗಳನ್ನು ಗೌರವಿಸುತ್ತೇನೆ, ಪೂಜ್ಯ ಭಾವನೆಯಿಂದ ನೋಡುತ್ತೇನೆ. ಅವರು ಸಂಸದರಾಗಿದ್ದಾರೆ, ನಾವು, ಅವರು ಒಟ್ಟಿಗೆ ಒಂದೇ ಕಡೆ ವಾಸವಿದ್ದೇವೆ. ಕ್ಷೇತ್ರಕ್ಕೆ ಅಂಟಿರುವ ಕಳಂಕ ದೂರವಾಗಲಿ ಎಂದು ಪ್ರಾರ್ಥಿಸುತ್ತೇನೆ.
>
> – ಶ್ರೇಯಸ್ ಪಟೇಲ್, ಸಂಸದ



ಅ. 6ರಂದು ವಿಚಾರಣೆಗೆ ಹಾಜರಾಗುವಂತೆ ಸುಪ್ರೀಂ ಕೋರ್ಟ್ ಶ್ರೇಯಸ್ ಪಟೇಲ್ ಅವರಿಗೆ ನೋಟಿಸ್ ಜಾರಿ ಮಾಡಿದೆ. ನೋಟಿಸ್ ಪ್ರತಿಯನ್ನು ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿರುವ ಸಂಸದರ ಕಚೇರಿ ಬಾಗಿಲಿಗೆ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಚುನಾವಣಾ ಏಜೆಂಟ್ ಆಗಿದ್ದ ವಕೀಲ ಪೂರ್ಣಚಂದ್ರ ತೇಜಸ್ವಿ ಅವರು ಶುಕ್ರವಾರ ಅಂಟಿಸಿದರು.

ಕೋರ್ಟ್ ಸೂಚನೆಯಂತೆ ಖುದ್ದು ನೋಟಿಸ್ ನೀಡಲು ನಾನು ಬಂದಿದ್ದೇನೆ. ಯುವ ಸಂಸದರಾಗಿ ಕಾನೂನಿಗೆ ಗೌರವ ಕೊಡಬೇಕಿತ್ತು. ಆದರೆ, ಶ್ರೇಯಸ್ ಪಟೇಲ್ ಅವರು ವಕೀಲರಾದ ನನ್ನನ್ನು ನೀವು ಹಮೀನರಾ ಎಂದು ಕೇಳುತ್ತಾರೆ. ಸಂಸದರು ವಕೀಲ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ ಎಂದು ವಕೀಲ ಪೂರ್ಣಚಂದ್ರ ತೇಜಸ್ವಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೋಟಿಸ್ ಸ್ವೀಕರಿಸದೆ ಬೇಡ ಎನ್ನಬೇಕಿತ್ತು, ಇದನ್ನೇ ಕೋರ್ಟ್‌ಗೆ ಹೇಳುತ್ತೇವೆ. ನೋಟಿಸ್ ಸ್ವೀಕಾರ ಮಾಡದಿದ್ದರೆ ಕೋರ್ಟ್‌ಗೆ ಹಾಜರಾಗುವುದಿಲ್ಲವೇ, ಕೋರ್ಟ್‌ನಲ್ಲಿ ವಾದ ಮಾಡಲು ವಕೀಲರ ನೇಮಕ ಮಾಡಿಕೊಳ್ಳುವುದಿಲ್ಲವೇ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಇವರ ನಡೆ ಹೀಗಿರುತ್ತೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಸಂಸದರು ತಮ್ಮ ನಡೆಯನ್ನು ಬದಲಾಯಿಸಿಕೊಳ್ಳಬೇಕೆಂದು ಹೇಳಿದರು.

ನನ್ನ ಪ್ರಕರಣದ ನೋಟೀಸನ್ನು ಖುದ್ದು ನೀಡಲು ಕಾನೂನಿನಲ್ಲಿ ಅವಕಾಶವಿದೆ. ಗೌರವಾನ್ವಿತ ಸಂಸದರ ಮೇಲೆ ವಕೀಲರೊಂದಿಗೆ ನಡೆದುಕೊಳ್ಳುವ ರೀತಿ ಇದಲ್ಲ. ಕಾನೂನು ತಿಳಿದುಕೊಂಡು ಮಾತನಾಡಬೇಕು ಅಧಿಕಾರ ಯಾರಿಗೂ ಶಾಶ್ವತವಲ್ಲ, ಎಂಥೆಂಥವರೋ ಏನೇನೊ ಆಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

# ವಲಯ ಮಟ್ಟದ ಕ್ರೀಡಾಕೂಟ ಕಲ್ಲಹಳ್ಳಿ ಶಾಲೆಗೆ ಸಮಗ್ರ ಪ್ರಶಸ್ತಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ದಕ್ಷಿಣ ವಲಯ ತಾಲ್ಲೂಕು ಮಟ್ಟದ ಪ್ರೌಢಶಾಲಾ ಹಂತದ ಕ್ರೀಡಾಕೂಟದಲ್ಲಿ ಕಲ್ಲಹಳ್ಳಿ ಶಾಲೆಯ ಬಾಲಕಿಯರು 32 ಅಂಕಗಳೊಂದಿಗೆ ಪ್ರಥಮ ತಂಡವಾಗಿ ಸಮಗ್ರ ಪ್ರಶಸ್ತಿ ಪಡೆದಿದ್ದಾರೆ. ಕ್ರೀಡಾಕೂಟದಲ್ಲಿ 30 ಶಾಲೆಗಳು ಭಾಗವಹಿಸಿದ್ದವು. 3000 ಮೀ. ಓಟದಲ್ಲಿ ನಂದಿನಿ (ದ್ವಿತೀಯ), ಉದ್ದ ಜಿಗಿತ ತನುಶ್ರೀ (ದ್ವಿತೀಯ), ವಾಣಿಶ್ರೀ (ತೃತೀಯ), ಎತ್ತರ ಜಿಗಿತ ಮಾನಸ (ತೃತೀಯ), ತ್ರಿವಿಧ ಜಿಗಿತದಲ್ಲಿ ವಾಣಿಶ್ರೀ (ಪ್ರಥಮ), ತನುಶ್ರೀ (ದ್ವಿತೀಯ), ಭರ್ಜಿ ಎಸೆತದಲ್ಲಿ ಮಾನಸ (ದ್ವಿತೀಯ), ಚೈತ್ರ (ತೃತೀಯ) ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ.

4★100 ಮೀ. ರಿಲೇ ಓಟದಲ್ಲಿ ಶಶಿಕಲಾ, ಗಾನವಿ, ಮಾನ್ವಿ, ಮಾನಸ ತಂಡ ದ್ವಿತೀಯ, 4★400 ಮೀ. ರಿಲೇ ಓಟದಲ್ಲಿ ಶಶಿಕಲಾ, ಗಾನವಿ, ಮಾನ್ವಿ, ರಮ್ಯ ತಂಡ ಪ್ರಥಮ ಸ್ಥಾನ ಗಳಿಸಿದ್ದಾರೆ. ಬಾಲಕರ ವಿಭಾಗದಲ್ಲಿ 41 ಅಂಕ ಪಡೆಯುವುದರೊಂದಿಗೆ ಕೇವಲ 1 ಅಂಕದಿಂದ ಪ್ರಥಮ ಸ್ಥಾನ ಕೈತಪ್ಪಿ 2ನೇ ಸಮಗ್ರ ಪ್ರಶಸ್ತಿ ಪಡೆದ ಶಾಲೆಯಾಗಿ ಹೊರಹೊಮ್ಮಿದೆ.

400 ಮತ್ತು 800 ಮೀ. ಓಟದಲ್ಲಿ ಧನುಷ್ (ತೃತೀಯ), 3000 ಮೀ. ಓಟ ಸ್ಪರ್ಧೆಯಲ್ಲಿ ಪವನ್ (ಪ್ರಥಮ), ನವೀನ್ (ತೃತೀಯ), ತ್ರಿವಿಧ ಜಿಗಿತ ಪವನ್ (ತೃತೀಯ), ಗುಂಡು ಎಸೆತದಲ್ಲಿ ಗಗನ್ (ಪ್ರಥಮ), ಭರ್ಜಿ ಎಸೆತ ದೀಕ್ಷಿತ್ (ಪ್ರಥಮ), ಅಶೋಕ್ (ದ್ವಿತೀಯ), ಉದ್ದ ಜಿಗಿತದಲ್ಲಿ ದೀಕ್ಷಿತ್ (ದ್ವಿತೀಯ), ಎತ್ತರ ಜಿಗಿತ ದೀಕ್ಷಿತ್ (ಪ್ರಥಮ), ಹ್ಯಾಮರ್ ಎಸೆತದಲ್ಲಿ ಗುಣಶೇಖರ್ (ತೃತೀಯ) ಸ್ಥಾನ ಪಡೆದಿದ್ದಾರೆ.

4★100 ಮೀ. ರಿಲೇ ಓಟ ದೀಕ್ಷಿತ್, ಪವನ್, ಗಗನ್, ಅಶೋಕ್ ತಂಡ ಪ್ರಥಮ, 4★400 ಮೀ. ರಿಲೇಯಲ್ಲಿ ಗಗನ್, ಧನುಷ್, ಯುವರಾಜ್, ಪವನ್ ತಂಡ ತೃತೀಯ ಸ್ಥಾನ ಪಡೆದಿದೆ. ಕ್ರೀಡಾಪಟುಗಳಿಗೆ ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕ ಕೆ.ಸಿ. ರಘು, ಮುಖ್ಯಶಿಕ್ಷಕಿ ಎ.ಎಸ್. ಉಮಾಮಣಿ ಅಭಿನಂದನೆ ಸಲ್ಲಿಸಿದ್ದಾರೆ.

# ಈ ಬಾರಿ ಸಾಹಿತಿ ಬಾನು ಮುಷ್ತಾಕ್ ದಸರಾ ಉದ್ಘಾಟನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೆಂಗಳೂರು: ಪ್ರತಿಷ್ಠಿತ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರು ಈ ಬಾರಿ ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟಿಸಲಿದ್ದಾರೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶುಕ್ರವಾರ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಾನು ಮುಷ್ತಾಕ್ ಅವರ ಎದೆಯ ಹಣತೆ ಕೃತಿಗೆ ಬೂಕರ್ ಪ್ರಶಸ್ತಿ ಸಿಕ್ಕಿದೆ. ಕರ್ನಾಟಕದ ಮಹಿಳೆಗೆ ಬೂಕರ್ ಸಿಕ್ಕಿದ್ದು ಸಂತೋಷವಾಗಿದೆ. ಬಾನು ಮುಷ್ತಾಕ್ ಹೋರಾಟದ ಹಿನ್ನಲೆಯಿಂದ ಬಂದವರು. ರೈತ ಮತ್ತು ಕನ್ನಡ ಚಳವಳಿಯಲ್ಲೂ ಕೆಲಸ ಮಾಡಿದ್ದಾರೆ. ಹೀಗಾಗಿ ಅವರನ್ನು ದಸರಾ ಮಹೋತ್ಸವದ ಉದ್ಘಾಟನೆಗೆ ಆಹ್ವಾನಿಸಿದ್ದೇವೆ ಎಂದರು.

ಈ ಬಾರಿ ಮೈಸೂರು ದಸರಾ ಸೆ. 22 ರಿಂದ ಅ. 2ರ ವರೆಗೆ 11 ದಿನಗಳ ಕಾಲ ನಡೆಯಲಿದ್ದು, ಉದ್ಘಾಟನೆಗೆ ಮೈಸೂರು ಜಿಲ್ಲಾಡಳಿತವು ಕನ್ನಡದ ಲೇಖಕಿ ಬಾನು ಮುಷ್ತಾಕ್ ಅವರನ್ನು ಗೌರವದಿಂದ ಅಧಿಕೃತವಾಗಿ ಆಹ್ವಾನಿಸಲಿದೆ ಎಂದು ತಿಳಿಸಿದರು. ಬಳ್ಳಾರಿಯಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಬಾನು ಮುಷ್ತಾಕ್ ಆಯ್ಕೆಯಾಗಿದ್ದಾರೆ. ಹಾಸನದ ಸಾಹಿತಿ ಬಾನು ಮುಷ್ತಾಕ್ ಅವರು ಬರೆದ ಹಾರ್ಟ್ ಲ್ಯಾಂಪ್ (ಎದೆಯ ಹಣತೆ) ಕಥಾ ಸಂಕಲನಕ್ಕೆ ಬೂಕರ್ ಪ್ರಶಸ್ತಿ ಲಭಿಸಿದೆ.

### ಸೆಪ್ಟೆಂಬರ್‌ನಲ್ಲಿ ಬಿಡುವು ಮಾಡಿಕೊಳ್ಳಲು ಸಿಎಂ ಹೇಳಿದ್ರು

ನಾಡಹಬ್ಬ ದಸರಾ ಉದ್ಘಾಟನೆಗೆ ರಾಜ್ಯ ಸರ್ಕಾರದಿಂದ ಆಹ್ವಾನ ಸುದ್ದಿ ತಿಳಿದು ಸಂತಸವಾಗಿದೆ ಎಂದು ಸಾಹಿತಿ ಬಾನು ಮುಷ್ತಾಕ್ ಹರ್ಷ ವ್ಯಕ್ತಪಡಿಸಿದ್ದಾರೆ.

ಬೆಹರೇನ್ ಪ್ರವಾಸದಲ್ಲಿರುವ ಅವರು ಶುಕ್ರವಾರ ದೂರವಾಣಿ ಮೂಲಕ ಮಾತನಾಡಿ, ಸ್ನೇಹಿತರಿಂದ ವಿಷಯ ತಿಳಿಯಿತು. ಜುಲೈ ತಿಂಗಳಲ್ಲಿ ಕೇರಳ ಪ್ರವಾಸದಲ್ಲಿದ್ದ ಸಂದರ್ಭ ಮುಖ್ಯಮಂತ್ರಿ ಕರೆ ಮಾಡಿ ಸೆಪ್ಟೆಂಬರ್‌ನಲ್ಲಿ ಬಿಡುವು ಮಾಡಿಕೊಳ್ಳುವಂತೆ ಹೇಳಿದ್ದರು. ಆದರೆ, ದಸರಾ ಉದ್ಘಾಟನೆಗೆ ಅವಕಾಶ ಕಲ್ಪಿಸುತ್ತಾರೆ ಎಂದು ತಿಳಿದಿರಲಿಲ್ಲ. ದೊಡ್ಡ ಅವಕಾಶ ಲಭಿಸಿರುವುದು ಸಂತಸ ತಂದಿದೆ ಎಂದರು.

ಆ.27ಕ್ಕೆ ಕರ್ನಾಟಕಕ್ಕೆ ಬರಲಿದ್ದೇನೆ. ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಕರ್ನಾಟಕಕ್ಕೆ ಜಾಗತಿಕ ಮಟ್ಟದಲ್ಲಿ ಗುರುತು ಸಿಗುವಂತಾಗಿತ್ತು. ಇದು ಸರ್ಕಾರ, ರಾಜ್ಯದ ಜನತೆ, ನನಗೆ ವೈಯಕ್ತಿಕವಾಗಿಯೂ ಸಂತಸ ಉಂಟು ಮಾಡಿತ್ತು ಎಂದು ಹೇಳಿದರು.

# ಅಂಗನವಾಡಿ ನೌಕರರ ಸಂಘದಿಂದ ಸಹಿ ಸಂಗ್ರಹ ಅಭಿಯಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎಫ್.ಆರ್.ಎಸ್. ನಿಲ್ಲಿಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದಿಂದ ಸಹಿ ಸಂಗ್ರಹಿಸಿ ಮನವಿ ಸಲ್ಲಿಸಿ ಅಭಿಯಾನ ನಡೆಸಲಾಯಿತು.

ಇದೆ ವೇಳೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಂ.ಬಿ. ಪುಷ್ಪ ಮಾತನಾಡಿ, ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಾಂಕಕ್ಕಿರುವ ಏಕೈಕ ಯೋಜನೆ ಐಸಿಡಿಎಸ್ ಮಾತ್ರ. ಈ ಯೋಜನೆಗೆ ಇಂದು 50 ವರ್ಷಗಳಾಗುತ್ತಾ ಬರುತ್ತಿದೆ. ಈ ಯೋಜನೆಯನ್ನು ಸರಳೀಕರಿಸಿ ಫಲಾನುಭವಿಗಳನ್ನು ಆಕರ್ಷಿಸಲು ಸರ್ಕಾರಗಳು ಕ್ರಮಗಳನ್ನು ರೂಪಿಸಬೇಕಿತ್ತು. ಆದರೆ ಅದರ ಬದಲಾಗಿ ಸಂಕೀರ್ಣಗೊಳಿಸಲಾಗುತ್ತಿದೆ. ಯಾವುದೇ ಸೌಲಭ್ಯಗಳನ್ನು ಕೊಡದೇ ಮುಖಚರ್ಯೆ ಗುರ್ತಿಸುವ ಕ್ರಮವನ್ನು ಅಳವಡಿಸಿದ್ದರಿಂದ ಕ್ಷೇತ್ರಮಟ್ಟದಲ್ಲಿ ಹಲವಾರು ತೊಂದರೆಗಳನ್ನು ಅನುಭವಿಸುವಂತಾಗಿದೆ. 2013ರ ಆಹಾರ ಭದ್ರತಾ ಕಾಯ್ದೆಯ ಆಶಯವೇನೆಂದರೆ ಯಾವುದೇ




ಫಲಾನುಭವಿ ಹಸಿವಿನಿಂದ ನರಳಬಾರದು ಮತ್ತು ಸುಪ್ರಿಂ ಕೋರ್ಟ್ ನಿರ್ದೇಶನದ ಆಶಯವೇನೆಂದರೆ, ಆಧಾರ ಕಾರ್ಡ್ ಇಲ್ಲ ಎಂಬ ನೆಪದಲ್ಲಿ ಸಬ್ಸಿಡಿ ಹಾಗೂ ಉಚಿತವಾಗಿ ಸಿಗುವ ಸೌಲಭ್ಯಗಳಿಂದ ಫಲಾನುಭವಿಗಳಿಗೆ ವಂಚನೆಯಾಗಬಾರದು. ಈ ಆಶಯಗಳನ್ನು ಸಂರಕ್ಷಣೆ ಮಾಡಬೇಕಾದ ಸರ್ಕಾರಗಳು ಇಂದು ಈಖ ನ್ನು ಕಡ್ಡಾಯಗೊಳಿಸುವ ಮುಖಾಂತರ ಫಲಾನುಭವಿಗಳ ಹಕ್ಕನ್ನು ನಿರಾಕರಿಸುತ್ತಿವೆ ಎಂದರು. ಎಫ್.ಆರ್.ಎಸ್. ಮುಖಾಂತರ ಸಂಗ್ರಹಿಸುವ ಫಲಾನುಭವಿಗಳ ವೈಯಕ್ತಿಕ ಮಾಹಿತಿ ಸೋರಿಕೆಯಾಗುತ್ತದೆ. ವಿಪರೀತ ಸೈಬರ್ ವಂಚನೆಗಳು ಹೆಚ್ಚುತ್ತಿರುವುದು ತಮಗೆ ತಿಳಿದಿದೆ. ಆಹಾರ ಭದ್ರತಾ ಕಾಯ್ದೆಯ ಆಶಯವೇನೆಂದರೆ ಯಾವುದೇ ಫಲಾನುಭವಿ ಹಸಿವಿನಿಂದ ನರಳಬಾರದು ಮತ್ತು ಸುಪ್ರಿಂ ಕೋರ್ಟ್ ನಿರ್ದೇಶನದ ಆಶಯವೇನೆಂದರೆ, ಆಧಾರ ಕಾರ್ಡ್ ಇಲ್ಲ ಎಂಬ ನೆಪದಲ್ಲಿ ಸಬ್ಸಿಡಿ ಹಾಗೂ ಉಚಿತವಾಗಿ ಸಿಗುವ ಸೌಲಭ್ಯಗಳಿಂದ ಫಲಾನುಭವಿಗಳಿಗೆ ವಂಚನೆಯಾಗಬಾರದು. ಈ ಆಶಯಗಳನ್ನು ಸಂರಕ್ಷಣೆ ಮಾಡಬೇಕಾದ ಸರ್ಕಾರಗಳು ಇಂದು ನ್ನು ಕಡ್ಡಾಯಗೊಳಿಸುವ ಮುಖಾಂತರ ಫಲಾನುಭವಿಗಳ ಹಕ್ಕನ್ನು ನಿರಾಕರಿಸುತ್ತಿವೆ. ಸಂಗ್ರಹಿಸುವ ಫಲಾನುಭವಿಗಳ ವೈಯಕ್ತಿಕ ಮಾಹಿತಿ ಸೋರಿಕೆಯಾಗುತ್ತದೆ. ವಿಪರೀತ ಸೈಬರ್ ವಂಚನೆಗಳು ಹೆಚ್ಚುತ್ತಿರುವುದು ತಮಗೆ ತಿಳಿದಿದೆ. 60% ತನ್ನ ಪಾಲಿನ ವಂತಿಗೆಯನ್ನು ನೀಡಬೇಕಾದ ಕೇಂದ್ರ ಸರ್ಕಾರ ಈಖ ನಂತಹ ನಿರ್ಬಂಧಗಳನ್ನು ಹಾಕುವ ಮುಖಾಂತರ ತನ್ನ ಪಾಲಿನ ಹಣ ಕಡಿಮೆ ಮಾಡಲು ಮುಂದಾಗಿದೆ. ಚಟುವಟಿಕೆ ಆಧಾರದಲ್ಲಿ ಹಣ ಬಿಡುಗಡೆ ಮಾಡುವ ವಿಧಾನಗಳು ಮತ್ತು ಭಾರತದಲ್ಲಿ ಐಸಿಡಿಎಸ್ ಫಲಾನುಭವಿಗಳನ್ನು ಕಡಿಮೆ ತೋರಿಸಿ ಹಣ ಕಡಿತ ಮಾಡುವ ಯೋಜನೆ ಇದಾಗಿದೆ ಎಂದು ಹೇಳಿದರು.

ಈಗಾಗಲೇ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ 135 ನೇ ಸ್ಥಾನದಲ್ಲಿರುವ ಭಾರತ ಇದರಿಂದ ಮತ್ತಷ್ಟು ಕಳೆಗುಂದುತ್ತಿದೆ. ಎಫ್.ಆರ್.ಎಸ್ ನ್ನು ರದ್ದು ಮಾಡಿ ಐಸಿಡಿಎಸ್ ಯೋಜನೆಯನ್ನು ಖಾಯಂ ಮಾಡಬೇಕು, ಗುಜರಾತ್ ಹೈಕೋರ್ಟ್ ತೀರ್ಪಿನಂತೆ ಸಿ ಮತ್ತು ಡಿ ಗುಂಪಿನ ನೌಕರರೆಂದು ಪರಿಗಣಿಸಬೇಕು, 2018 ರಿಂದ ಅನ್ವಯವಾಗುವಂತೆ ವೇತನ ಹೆಚ್ಚಿಸಿ, ಫಲಾನುಭವಿಗಳ ಘಟಕ ವೆಚ್ಚ ಹೆಚ್ಚಿಸಬೇಕು ಎಂದು ಒತ್ತಾಯಿಸಿ 2025ರ ಆಗಸ್ಟ್ 21 ರಂದು ಕಪ್ಪು ಪಟ್ಟಿ ಧರಿಸುವ ಮುಖಾಂತರ ಕಪ್ಪು ದಿನವನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ನಾವು ಸರ್ಕಲ್ ಮತ್ತು ಸಹಾಯಕಿಯರು ಸಹಿ ಮಾಡಿದ ಮನವಿಯನ್ನು ತಮಗೆ ಕಳುಹಿಸುತ್ತಿದ್ದೇವೆ. ಪ್ರಾಜೆಕ್ಟ್‌ನ ಕಾರ್ಯಕರ್ತರು ಈ ಮನವಿಗೆ ಸ್ಪಂದಿಸದಿದ್ದರೆ ನವೆಂಬರ್ ಮತ್ತು ಡಿಸೆಂಬರ್ ನಲ್ಲಿ ಕೇಂದ್ರ ಸಚಿವರ ಮನೆಯ ಮುಂದೆ ಅನಿರ್ದಿಷ್ಟ ಅವಧಿಯ ಹೋರಾಟ ರೂಪಿಸಲಾಗುವುದು ಎಂಬ ಎಚ್ಚರಿಕೆಯನ್ನು ಈ ಮುಖಾಂತರ ಕೊಡುತ್ತಿದ್ದೇವೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಟಿ.ಹೆಚ್. ಜಯಂತಿ, ಖಜಾಂಚಿ ಮೀನಾಕ್ಷಿ, ಮುಖಂಡರಾದ ರಿಹಾನಾಭಾನು, ಬಿ.ಎಸ್. ಮಧು, ರಿಜ್ವಾನ್ ಭಾನು ಇತರರು ಉಪಸ್ಥಿತರಿದ್ದರು.

# ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಸುದೀಪ್ ಭೂಮಿ ಖರೀದಿಸಿದ್ದು ಅವರ ದೊಡ್ಡ ಮನಸ್ಸು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿಷ್ಣುವರ್ಧನ್ ಕುಟುಂಬದ ಜೊತೆ ಹತ್ತಿರವಿರುವ ನಟ ಸುದೀಪ್ ಸ್ಮಾರಕ ನಿರ್ಮಾಣಕ್ಕಾಗಿ ಭೂಮಿ ಖರೀದಿಸಿದ್ದು ಅವರ ದೊಡ್ಡ ಮನಸ್ಸು, ಅವರ ಪ್ರೀತಿ ಅದರಲ್ಲಿ ಕಾಣಿಸುತ್ತಿದೆ. ಅವರಿಗೆ ಶುಭಾಶಯ ಕೋರುತ್ತೇನೆ ಒಳ್ಳೆಯದಾಗಲಿ ಎಂದು ಚಲನಚಿತ್ರ ನಾಯಕಿ ರಾಗಿಣಿ ತಿಳಿಸಿದರು.

ನಗರದ ಖಾಸಗೀ ಕಾರ್ಯಕ್ರಮಕ್ಕೆ ಶುಕ್ರವಾರ ಆಗಮಿಸಿದ್ದ ಅವರು, ಇದೆ ವೇಳೆ ಮಾಧ್ಯಮದೊಂದಿಗೆ ಮಾತನಾಡಿ, ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಸುದೀಪ್ ಭೂಮಿ ಖರೀದಿ ಮಾಡಿದ ವಿಚಾರವಾಗಿ ಮಾತನಾಡಿ, ಸುದೀಪ್ ಅವರು ತುಂಬಾನೇ ವಿಷ್ಣುವರ್ಧನ್ ಫ್ಯಾಮಿಲಿ ಜೊತೆ ಕ್ಲೋಸ್ ಇದ್ದು, ವಿಷ್ಣುವರ್ಧನ್ ಅವರ ಅಭಿಮಾನಿ ಕೂಡ ಅವರು. ವಿಷ್ಣುವರ್ಧನ್ ಕುಟುಂಬದ ಜೊತೆ ಹತ್ತಿರವಿರುವ ನಟ ಸುದೀಪ್ ಭೂಮಿ



ಖರೀದಿಸಿದ್ದು ಅವರ ದೊಡ್ಡಮನಸ್ಸು, ಅವರ ಪ್ರೀತಿ ಅದರಲ್ಲಿ ಕಾಣಿಸುತ್ತಿದೆ. ಅವರಿಗೆ ಶುಭಾಶಯ ಕೋರುತ್ತೇನೆ ಒಳ್ಳೆಯದಾಗಲಿ ಎಂದರು. ದರ್ಶನ್ ಬೇಲ್ ರದ್ದು ವಿಚಾರ ನಾನು ಕಾನೂನನ್ನು ಪ್ರಬಲವಾಗಿ ನಂಬುವವಳು. ನಾವು ನಮ್ಮ ನಮ್ಮ ಜೀವನದಲ್ಲಿ ಸಾಕಷ್ಟು ಅನುಭವಿಸಿ ಬಿಟ್ಟಿದ್ದೇನೆ. ನನಗೆ ನ್ಯಾಯಾಂಗ ವ್ಯವಸ್ಥೆ ಬಗ್ಗೆ ಅಪಾರ ನಂಬಿಕೆ ಇದ್ದು, ಪ್ರಕ್ರಿಯೆ ವಿಳಂಬವಾಗಬಹುದು ಆದರೆ ನ್ಯಾಯ ಸಿಕ್ಕೇ ಸಿಗುತ್ತದೆ. ಕಮೆಂಟ್ ಬಾಕ್ಸ್ ಸ್ವಚ್ಛ ಭಾರತ್ ಆಗಿದೆ ಎಂಬ ನಟಿ ರಮ್ಯ ಹೇಳಿಕೆ ವಿಚಾರವಾಗಿ ಮಾಧ್ಯಮದವರ ಪ್ರಶ್ನೆಯೊಂದಕ್ಕೆ ಉತ್ತರಿಸಿ, ಸಮಾಜದಲ್ಲಿ ಹೆಣ್ಣುಮಕ್ಕಳ ಬಗ್ಗೆ ಕೆಟ್ಟದಾಗು ನಿರ್ಧಾರ ಮಾಡೋದು, ತೇಜೋವಧೆ ಮಾಡುವುದು ಇದ್ದೇ ಇರುತ್ತದೆ. ಇದನ್ನು ರಮ್ಯಾ ವಿಚಾರದಿಂದ ನೋಡುತ್ತಿಲ್ಲ. ಪ್ರತಿಯೊಂದು ಹೆಣ್ಣು ಮಕ್ಕಳಿಗೆ ಹೀಗೆ ಆಗುತ್ತಿದೆ. ಮಹಿಳೆಯರು ಸುಲಭವಾಗಿ ಟಾರ್ಗೆಟ್ ಆಗ್ತಾರೆ, ಅದು ತಪ್ಪು. ಹೆಣ್ಣುಮಕ್ಕಳ ಬಗ್ಗೆ ನೆಗೆಟಿವಿಟಿ ಹಬ್ಬಿಸಬಾರದು, ತುಂಬಾ ಚಿಕ್ಕ ಜೀವನ, ನಗು ನಗುತ್ತಾ ಪಾಸಿಟಿವ್ ಆಗಿ ಇರಬೇಕು. ನಮಗೆ ಆದಂತಹ ಜವಾಬ್ದಾರಿ, ಕೆಲಸಗಳು ಇರುತ್ತದೆ. ಅದನ್ನು ಮೀರಿ ಅಷ್ಟು ಸಮಯ ತಗೊಂಡು ಇನ್ನೊಬ್ಬರ ಬಗ್ಗೆ ನೆಗೆಟಿವ್ ಆಗಿ ಮಾತನಾಡುತ್ತಿದ್ದೀರಿ ಅಂದರೆ ನೀವು ತುಂಬಾ ದೊಡ್ಡ ಮನುಷ್ಯರು! ನಿಮ್ಮ ಹತ್ತಿರ ತುಂಬಾ ಸಮಯ ಇದೆ, ನಮ್ಮ ಹತ್ತಿರ ಅಷ್ಟು ಸಮಯ ಇಲ್ಲ. ಸಮಯ ವ್ಯರ್ಥ ಮಾಡಿಕೊಂಡು ಕಮೆಂಟ್ ಮಾಡುವವರು ಇದ್ದಾರೆ. ಸಾಮಾಜಿಕ ಜಾಲತಾಣಗಳನ್ನು ಒಳ್ಳೆಯದಕ್ಕೆ ಬಳಸಿ. ರಮ್ಯಾ ಅವರ ಬಗ್ಗೆ ತುಂಬಾ ಕೆಟ್ಟದಾಗಿ, ಅಶ್ಲೀಲ ಪದಗಳನ್ನು ಬಳಸಿ ಕಮೆಂಟ್ ಮಾಡಿದ್ರು. ಆ ರೀತಿ ಹೆಣ್ಣುಮಗಳ ಬಗ್ಗೆ ಕಮೆಂಟ್ ಮಾಡಬಾರದು ಎಂದು ಹೇಳಿದರು.

# ಜಾನಪದ ಜ್ಞಾನ-ಅನುಭವಕ್ಕೂ ಮಿಗಿಲಾದುದ್ದು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಮ್ಮ ಮಹಾಕಾವ್ಯದಲ್ಲೂ ಜಾನಪದದ ಉಲ್ಲೇಖವಿದ್ದು, ಜಾನಪದ ಎಂದರೇ ಜನರ ಜ್ಞಾನ, ಜನರ ಅನುಭವ ಹಾಗೂ ಅದಕ್ಕೂ ಮಿಗಿಲಾದುದ್ದು. ಮಾನವ ಕುಲಕ್ಕೆ ಬೇಕಾಗಿರುವ ಸಂಸ್ಕಾರವೆ ಜಾನಪದ ಎಂದು ಅಪರ ಜಿಲ್ಲಾಧಿಕಾರಿ ವಿ. ಮಂಜುನಾಥ್ ತಿಳಿಸಿದರು.

ನಗರದ ಎಂ.ಜಿ. ರಸ್ತೆ ಬಳಿ ಇರುವ ಮಹಿಳಾ ಸರಕರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಕರ್ನಾಟಕ ಜಾನಪದ ಪರಿಷತ್ತು ಹಾಗೂ ಕಾಲೇಜು ಕನ್ನಡ ವಿಭಾಗ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರದಂದು ಹಮ್ಮಿಕೊಳ್ಳಲಾಗಿದ್ದ ವಿಶ್ವ ಜಾನಪದ ದಿನಾಚರಣೆಯನ್ನು ಜ್ಯೋತಿ ಬೆಳಗಿ ಡೋಲು ಭಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ದೇಶ ಎಂದರೇ ವಿಶಾಲವಾಗಿದ್ದು, ಹಲವಾರು ರಾಜ್ಯಗಳಿದ್ದರೂ ನಮ್ಮ ಕರ್ನಾಟಕದಲ್ಲಿ ಜಾನಪದ ವಿಶ್ವವಿದ್ಯಾಲಯ ಇದೆ ಎಂದರೇ ಮಾನವ ಕುಲಕ್ಕೆ ಹೆಮ್ಮೆಯ ಸಂಗತಿ. ಜಾನಪದ ಎಂಬುದು ಇವತ್ತಿನ ನೆನ್ನೆಯ ಕಲ್ಪನೆಯಲ್ಲ. ಕ್ರಿಸ್ತ




ಪೂರ್ವದಿಂದಲೂ ಬಂದಿರುವುದು. ನಮ್ಮ ಮಹಾಕಾವ್ಯದಲ್ಲೂ ಜಾನಪದದ ಉಲ್ಲೇಖವಿದೆ. ಜಾನಪದ ಎಂದರೇ ಜನರ ಜ್ಞಾನ, ಜನರ ಅನುಭವ. ಅದಕ್ಕೂ ಮಿಗಿಲಾದುದ್ದು ಮಾನವ ಕುಲಕ್ಕೆ ಬೇಕಾಗಿರುವ ಸಂಸ್ಕಾರವೆ ಜಾನಪದ ಎಂದರು. ಕರ್ನಾಟಕದಲ್ಲಿ ಜಾನಪದಕ್ಕೆ ಸಂಬಂಧಿಸಿದಂತೆ ಸಂಶೋಧನೆ ಕೂಡ ಮಾಡಿದೆ. ನಮ್ಮ ಜಾನಪದ ಸಂಸ್ಕೃತಿ ಎಂಬುದು ಎಲ್ಲೆಡೆ ಪ್ರಖ್ಯಾತಿಯನ್ನು ಪಡೆದಿದೆ. ಕಲೆಗಳನ್ನು ಪೂಜಿಸಬೇಕು, ಕಲೆಗೆ ಇರುವ ಬದ್ಧತೆ ಇರಬೇಕು. ಜಾನಪದ ಶೈಲಿಯಲ್ಲಿ ಹಲವಾರು ವಿಧಗಳಿವೆ. ಕಲೆಗೆ ಯಾವ ವಯಸ್ಸಿಲ್ಲ. ಇತಿಹಾಸ ಬಲ್ಲದವರು ಇತಿಹಾಸ ಸೃಷ್ಟಿ ಮಾಡಲು ಸಾಧ್ಯವಿಲ್ಲ. ಇರುವ ಅವಕಾಶದಿಂದ ವಂಚಿತರಾಗದೇ ಬಳಸಿಕೊಳ್ಳಿ. ಇರುವ ಪ್ರತಿಭೆಯನ್ನು ಹೊರ ತನ್ನಿ. ಜನಪದ ಎಂಬುದು ಅಮುಲ್ಯವಾದುದ್ದು ಎಂದು ಹೇಳಿದರು.

ಕರ್ನಾಟಕ ಜಾನಪದ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಡಾ. ಹಂಪನಹಳ್ಳಿ ತಿಮ್ಮೇಗೌಡ ಪ್ರಾಸ್ತಾವಿಕ ನುಡಿಯಲ್ಲಿ ಮಾತನಾಡಿ, ಜನಪದ ಕಲೆಗಳ ಮುಂದಿನ ತಲೆಮಾರಿಗೂ ಕೊಂಡೊಯ್ಯಲು ಮುಂದಾಗಬೇಕು. ಜನ ಎಲ್ಲಿ ಇರುತ್ತಾರೆ ಅಲ್ಲಿ ಜನಪದ ಕಲೆ ಇರುತ್ತದೆ. ಜನರು ಇಲ್ಲದಿದ್ದರೇ ಜನಪದ ಅಂದು ಉಳಿಯುವುದಿಲ್ಲ. ಜನಪದ ಕಲೆಗಳಿಗೆ ಜಾತಿ ಎಂಬುದು ಇರುವುದಿಲ್ಲ ಎಂದರು. ಒಂದು ಸಮುದಾಯ ತನ್ನ ಜಾನಪದ ಉಳಿಸಿ ಬೆಳೆಸುವುದು ಜವಾಬ್ದಾರಿ ಇರುತ್ತದೆ. ಯುವ ಜನಾಂಗ ಹೆಚ್ಚು ಆಸಕ್ತಿ ವಹಿಸಬೇಕು. ಯುವ ಜನಾಂಗಕ್ಕೆ ಜಾಗೃತಿ ಮೂಡಿದಲು ಶಾಲಾ ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇಡೀ ಭಾರತದಲ್ಲಿ ಅಕಾಡೆಮಿ ಸ್ಥಾಪನೆ ಮಾಡಿದೆ ಎಂದರೆ ಅದು ಕರ್ನಾಟಕ ಮಾತ್ರ. ಎಂದು ಶ್ಲಾಘಿಸಿದರು.

ಕಾರ್ಯಕ್ರಮಕ್ಕೆ ಮೊದಲು ನಗರದ ಎಂ.ಜಿ. ರಸ್ತೆ ಬಳಿಯಿಂದ ಆಕರ್ಷಕ ಸಾಂಸ್ಕೃತಿಕ ಕಲಾತಂಡದೊಡನೆ ಮೆರವಣಿಗೆ ಮೂಲಕ ಮಹಿಳಾ ಸರಕಾರಿ ಕಾಲೇಜಿಗೆ ಆಗಮಿಸಿದರು.

ಇದೆ ವೇಳೆ ಮಹಿಳಾ ಸರಕರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲೆ ಕೆ.ಜಿ. ಕವಿತಾ, ಜಾನಪದ ವಿದ್ವಾಂಸ ಮೇಟಿಕೆರೆ ಹಿರಿಯಣ್ಣ, ಸಾಹಿತಿ ಎನ್.ಎಲ್. ಚನ್ನೇಗೌಡ, ಹಿರಿಯ ಕಲಾವಿದ ಗ್ಯಾರಂಟಿ ರಾಮಣ್ಣ, ಕನ್ನಡ ವಿಭಾಗದ ಮುಖ್ಯಸ್ಥ ಬಿ.ಹೆಚ್. ರಾಮೇಗೌಡ, ಐ.ಕ್ಯೂ.ಎ.ಸಿ. ಸಂಚಾಲಕ ಎಸ್. ಯೋಗೇಶ್, ಕಲಾವಿದರ ಸಂಘದ ಅಧ್ಯಕ್ಷ ಮೈಕ್ ಕುಮಾರ್, ಕಲಾವಿದ ದುದ್ದ ಯೋಗೇಂದ್ರ, ಕಾರ್ಯದರ್ಶಿ ಬಿ.ಟಿ. ಮಾನವ ಇತರರು ಉಪಸ್ಥಿತರಿದ್ದರು. ಪುರುಷೋತ್ತಮ್ ಸ್ವಾಗತಿಸಿದರು. ಸಿಂಚನಾ ನಿರೂಪಿಸಿದರು.

# ಕ್ಯೂಬಾ ಪ್ರಗತಿಗೆ ಫಿಡೆಲ್ ಕ್ಯಾಸ್ಟ್ರೋ ಕೊಡುಗೆ ಅಪಾರ: ಕೆ.ಎಸ್. ರವಿಕುಮಾರ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕ್ಯೂಬಾ ದೇಶ ಸಾಕ್ಷರತೆ, ವೈದ್ಯಕೀಯ ಕ್ಷೇತ್ರ ಮತ್ತು ಮಾನವ ಅಭಿವೃದ್ಧಿಯಲ್ಲಿ ಜಾಗತಿಕ ಗಮನ ಸೆಳೆಯುವಂತಹ ಸಾಧನೆ ಮಾಡುವುದರಲ್ಲಿ ದೀರ್ಘಕಾಲ ಜನಪರ ಅಧಿಕಾರ ನಡೆಸಿದ ಫಿಡೆಲ್ ಕ್ಯಾಸ್ಟ್ರೋ ಪಾತ್ರ ಮಹತ್ತರವಾದುದ್ದು ಎಂದು ಬರಹಗಾರ ಕೆ.ಎಸ್. ರವಿಕುಮಾರ್ ಹೇಳಿದರು.

ನಗರದ ಶ್ರಮ ಕಚೇರಿಯಲ್ಲಿ ಜಿಲ್ಲಾ ಕ್ಯೂಬಾ ಸೌಹಾರ್ದ ಸಮಿತಿ ಏರ್ಪಡಿಸಿದ್ದ ಕ್ಯೂಬಾ ಸೌಹಾರ್ದ ದಿನ ಮತ್ತು ಫಿಡೆಲ್ ಕ್ಯಾಸ್ಟ್ರೋ ಜನ್ಮ ಶತಮಾನೋತ್ಸವದಲ್ಲಿ ಮಾತನಾಡಿ, ಕೃಷಿ ಪ್ರಧಾನವಾಗಿರುವ ಪುಟ್ಟ ಕ್ಯೂಬಾ ದೇಶವನ್ನು ಎಲ್ಲಾ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುವಂತೆ ಮಾಡಿದ್ದು ಫಿಡೆಲ್ ಕ್ಯಾಸ್ಟ್ರೋ ಮತ್ತು ಅಲ್ಲಿನ ಸಮಾಜವಾದಿ ವ್ಯವಸ್ಥೆ ಎಂದರು.




ಪುಟ್ಟ ದೇಶದ ಮೇಲೆ ಅಮೇರಿಕಾ ಸಾಮ್ರಾಜ್ಯಶಾಹಿ ಆರ್ಥಿಕ ದಿಗ್ಬಂಧನವನ್ನು ನಿರಂತರವಾಗಿ ಹೇರುತ್ತಿದ್ದರೂ, ಲಭ್ಯವಿರುವ ಅಲ್ಪ ಸಂಪನ್ಮೂಲದಲ್ಲಿಯೇ ದೇಶವನ್ನು ಅತ್ಯಂತ ಯಶಸ್ವಿಯಾಗಿ ಅಭಿವೃದ್ಧಿ ಪಡಿಸಿದ್ದು ಕಮ್ಯೂನಿಸ್ಟ್ ನಾಯಕ ಫಿಡೆಲ್ ಕ್ಯಾಸ್ಟ್ರೋ. ಅಮೇರಿಕಾ ದಿಗ್ಬಂಧನವನ್ನು ಹೇರಿದ ನಂತರ ಪೆಟ್ರೋಲಿಯಂ ಉತ್ಪನ್ನಗಳು ದೇಶಕ್ಕೆ ಆಮದಾಗುವುದು ನಿಂತು ಹೋಗುತ್ತದೆ ಇಂಥ ಕಾಲಘಟ್ಟದಲ್ಲಿ ಕ್ಯೂಬಾ ದೇಶದ ಜನರೆಲ್ಲರೂ ಸೈಕಲ್ ಬಳಸಲು ಪ್ರಾರಂಭಿಸುತ್ತಾರೆ ಇದರಿಂದ ದೇಶದ ಜನರ ಆರೋಗ್ಯ ಸುಧಾರಿಸುತ್ತದೆ ಎಂದು ಹೇಳಿದರು.

ಕ್ಯೂಬಾ ದೇಶದ ರೈತರು ಹೆಚ್ಚು ಕಬ್ಬು ಬೆಳೆಯುತ್ತಾರೆ, ವೈಜ್ಞಾನಿಕ ವಿಧಾನದಲ್ಲಿ ಸಾವಯವ ಕೃಷಿ ಮಾಡುವ ಪದ್ಧತಿಯನ್ನು ಅಳವಡಿಸಿಕೊಂಡು ಹೆಚ್ಚಿನ ಇಳುವರಿಯನ್ನೂ ಪಡೆಯುತ್ತಾರೆ. ಹೆಚ್ಚು ಶಿಕ್ಷಕರು, ವೈದ್ಯರು, ಕ್ರೀಡಾ ತರಬೇತಿದಾರರು ಇದ್ದು ಅಮೇರಿಕಾದಲ್ಲೂ ಇಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದನ್ನು ಕಾಣಬಹುದು. ಇದಕ್ಕೆ ಕ್ಯಾಸ್ಟ್ರೋ ಮತ್ತು ಅವರ ಸಂಗಾತಿಗಳ ದೂರ ದೃಷ್ಟಿ ಯೋಜನೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿವೆ. ಕೊರೊನಾ ಸಂದರ್ಭದಲ್ಲಿ ಈ ಪುಟ್ಟ ದೇಶದಲ್ಲಿ ಐದು ರೋಗ ನಿರೋಧಕ ಲಸಿಕೆಗಳನ್ನು ಕಂಡುಹಿಡಿದು ಅತ್ಯಂತ ಕಡಿಮೆ ಅವಧಿಯಲ್ಲಿ ಇಡೀ ದೇಶದ ಜನರಿಗೆ ರೋಗ ನಿರೋಧಕ ಲಸಿಕೆ ಹಾಕಿಸಿದರು. ಆ ಮೂಲಕ ಕೊರೊನ ರೋಗಕ್ಕೆ ತುತ್ತಾಗುವ ದೇಶದ ಜನರನ್ನು ಸಂರಕ್ಷಿಸಿದರು ಎಂದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಮಾತನಾಡಿ, ಕ್ಯೂಬಾ ಮತ್ತು ಕ್ಯಾಸ್ಟ್ರೋ ಜಗತ್ತಿನ ಸಮಾನತೆಯ ಆಶಾಕಿರಣಗಳಿದ್ದಂತೆ. ಇಂತಹ ಆಶಾಕಿರಣವನ್ನೇ ಇಲ್ಲವಾಗಿಸಬೇಕೆಂದು ಅಮೇರಿಕಾ ಸತತ ಪ್ರಯತ್ನಿಸಿದರೂ ಅದು ಸಾಧ್ಯವಾಗಿಲ್ಲ. ಈಗ ಟ್ರಂಪ್ ಅಧ್ಯಕ್ಷರಾದ ಮೇಲೆ ಮತ್ತಷ್ಟು ಆರ್ಥಿಕ ದಿಗ್ಬಂದನ ಹೆಚ್ಚಾಗಿದೆ ಎಂದರು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್ ಮಾತನಾಡಿ, ಕ್ಯೂಬಾ, ಕ್ಯಾಸ್ಟ್ರೋ ಮತ್ತು ಚೇ ಈ ಮೂರು ಹೆಸರು ಸಮಾನತೆಯ ಕನಸುಕಾಣುವವರಿಗೆ ಸ್ಪೂರ್ತಿಯ ಸೆಲೆಗಳು. ಕೇವಲ ಒಂದು ಕೋಟಿ ಜನಸಂಖ್ಯೆಯನ್ನು ಹೊಂದಿರುವ ಕ್ಯೂಬಾ ಭಾರತಕ್ಕಿಂತ ತಡವಾಗಿ ಅಂದರೆ 1959 ರಲ್ಲಿ ಕ್ರಾಂತಿ ಮಾಡಿ, ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಜಗತ್ತಿನ 193 ರಾಷ್ಟ್ರಗಳ ಪೈಕಿ 50ನೇ ಸ್ಥಾನದಲ್ಲಿದೆ. ಆದರೆ ಭಾರತ ಮಾತ್ರ 1947 ರಲ್ಲಿ ಸ್ವತಂತ್ರವಾದರೂ 130ನೇ ಸ್ಥಾನದಲ್ಲಿದೆ. ಅಂದರೆ ಒಂದು ದೇಶದ ಅಭಿವೃದ್ಧಿ ಎಂದರೆ ಅದು ಅಲ್ಲಿಯ ಜನತೆಯ ಮಾನವಾಭಿವೃದ್ಧಿ ಇದು ಸಮಾಜವಾದಿ ಅಭಿವೃದ್ಧಿಯ ಮಾದರಿ ಎಂದು ಫಿಡೆಲ್ ಕ್ಯಾಸ್ಟ್ರೋ ತಮ್ಮ ಕೆಲಸದ ಮೂಲಕ ಸಾಧಿಸಿ ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಷ್ಪ, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್, ಅಹಮುದ್ ಹಗರೆ, ಹರೀಶ್ ಕಟ್ಟೆ, ಪ್ರಕಾಶ್, ಅರವಿಂದ್ ಇದ್ದರು.

# ಸಾಲಭಾದೆಗೆ ಹೆದರಿ ನೇಣಿಗೆ ಶರಣಾದ ರೈತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ಸಾಲಭಾದೆ ತಾಳಲಾರದೆ ರೈತ ನೇಣಿಗೆ ಶರಣಾಗಿರುವ ಘಟನೆ ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿ ನೆಲಬಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ತಿಮೇಗೌಡ ತಮ ಜಮೀನಿನ ಮರದಲ್ಲಿ ನೇಣು ಬಿಗಿದುಕೊಂಡಿದ್ದಾರೆ. ಬೆಳಿಗ್ಗೆ ಉಪಾಹಾರದ ಬಳಿಕ ಜಮೀನಿಗೆ ಹೋಗಿ ಬರುವುದಾಗಿ ಹೇಳಿ ತೆರಳಿದ್ದರು. ಮಧ್ಯಾಹ್ನ ಊಟಕ್ಕೆ ಬರದೇ ಇದ್ದ ಕಾರಣ ಜಮೀನು ಬಳಿ ಕುಟುಂಬಸ್ಥರು ತೆರಳಿದಾಗ ಮರದಲ್ಲಿ ನೇತಾಡುತ್ತಿರುವುದು ಕಂಡಿದೆ.

ರೈತನಿಗೆ ನಾಲ್ಕು ಎಕರೆ ಜಮೀನು ಇದ್ದು, ಶುಂಠಿ ಮತ್ತು ಜೋಳ, ಕಾಫಿ, ಮೆಣಸು ಮಿಶ್ರ ಬೆಳೆ ಮಾಡಿಕೊಂಡಿದ್ದರು. ಮಲ್ಲಿಪಟ್ಟಣ ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ನಲ್ಲಿ 1 ಲಕ್ಷ ರೂ., 4 ಲಕ್ಷ ರೂ. ಮೌಲ್ಯದ ಒಡವೆಗಳನ್ನು ಬ್ಯಾಂಕ್‌ನಲ್ಲಿ ಅಡಮಾನ ಸಾಲ ಮತ್ತು ಒಂದು ಲಕ್ಷ ರೂ ಕೈ ಸಾಲ ಮಾಡಿಕೊಂಡಿದ್ದರು ಎನ್ನಲಾಗಿದೆ.

ಅತಿಯಾದ ಮಳೆಯಿಂದ ಎಲ್ಲಾ ಬೆಳೆಗಳು ಹಾನಿಯಾಗಿದ್ದು, ಸಾಲಕ್ಕೆ ಹೆದರಿ ಆತಹತ್ಯೆ ಮಾಡಿಕೊಂಡಿದ್ದಾರೆ. ತಹಶೀಲ್ದಾರ್ ಕೆ.ಸಿ. ಸೌಮ್ಯ ಮತ್ತು ಗ್ರೇಡ್ -2 ತಹಶೀಲ್ದಾರ್ ಸ್ವಾಮಿ, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ಕವಿತಾ ಅವರು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ತಾಲ್ಲೂಕು ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

# ಏಡ್ಸ್ ನಿಯಂತ್ರಣ ಕುರಿತ ಬಿತ್ತಿಚಿತ್ರ ಪ್ರದರ್ಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ನಿತ್ಯ ಚಿಕಿತ್ಸೆಗೆ ಬರುವ ಸಾರ್ವಜನಿಕರಿಗೆ ಹೆಚ್ ಐವಿ ಕುರಿತ ಆರೋಗ್ಯ ಜಾಗೃತಿಯ ಬಿತ್ತಿಚಿತ್ರ ಪ್ರದರ್ಶನ ಹಾಗೂ ಆರೋಗ್ಯ ಅರಿವು ಕಾರ್ಯಕ್ರಮ ಬುಧವಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಸ್ವಾಮಿಗೌಡ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರ ಸಾಕಷ್ಟು ಆರೋಗ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅತೀ ಮುಖ್ಯವಾಗಿರುವಂತ ಹೆಚ್‌ಐವಿ ಹಾಗೂ ಏಡ್ಸ್ ಕಾಯಿಲೆಯ ನಿಯಂತ್ರಣ ಕುರಿತು ಆರೋಗ್ಯ ಚಿಕಿತ್ಸೆ. ಮುನ್ನೆಚ್ಚರಿಕೆ ಕ್ರಮ



ಹಾಗೂ ಅರಿವು ಮೂಡಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯ ಈ ಕಾಯಿಲೆಗೆ ತುತ್ತಾಗುತ್ತಿರುವುದು ನೋವಿನ ಸಂಗತಿ ಆದ್ದರಿಂದ ಜನರು ಎಚ್ಚೆತ್ತುಕೊಂಡು ಜಾಗೃತರಾಗಬೇಕು. ಕಾಯಿಲೆ ಹರಡುವ ವಿಧಾನಗಳನ್ನು ತಿಳಿದುಕೊಂಡು ಮುಂಜಾಗ್ರತೆ ವಹಿಸಿದರೆ ಖಂಡಿತವಾಗಿಯೂ ಉತ್ತಮ ಸಮಾಜ ನಿರ್ಮಿಸಬಹುದು ಎಂದು ಸಲಹೆ ಮಾಡಿದರು.

ಸಾರ್ವಜನಿಕ ಆಸ್ಪತ್ರೆ ಆಪ್ತ ಸಮಾಲೋಚಕ ಪರಶುರಾಮ್ ಶಿರೂರ ಪ್ರಾಸ್ತಾವಿಕವಾಗಿ ಮಾತನಾಡಿ, ಹೆಚ್ ಐವಿ, ಏಡ್ಸ್, ಕ್ಷಯರೋಗ ಹಾಗೂ ಸಿಪಿಲಿಸ್ ಹೆಚ್‌ಬಿಎಸ್ಎಜಿ ಈ ರೀತಿಯಲ್ಲಿ ಹಲವಾರು ಕಾಯಿಲೆಗಳು ಕಂಡು ಬರುತ್ತಿದ್ದು ಆದ್ದರಿಂದ ಜನರು ಜಾಗೃತರಾಗಿ ಈ ರೀತಿಯ ಆರೋಗ್ಯ ಅರಿವು ಹಾಗೂ ಉಚಿತ ತಪಾಸಣಾ ಶಿಬಿರಗಳ ಸದುಪಯೋಗ ಪಡೆದುಕೊಳ್ಳಬೇಕು. ಜೊತೆಗೆ ಇತ್ತೀಚಿನ ದಿನಗಳಲ್ಲಿ ಜನರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಇಡೀ ರಾಜ್ಯಾದ್ಯಂತ ಬಿತ್ತಿ ಚಿತ್ರಗಳ ಪ್ರಚಾರ ಆಂದೋಲನ ಕೈಗೊಳ್ಳಲಾಗುತ್ತಿದೆ ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಂಜುಳಾ ಮಾತನಾಡಿ, ಡೆಂಗ್ಯೂ ಕಾಯಿಲೆಯ ಕುರಿತ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮತ್ತು ಮನೆಗಳ ಸುತ್ತಮುತ್ತ ಸ್ವಚ್ಛವಾಗಿ ಇಟ್ಟುಕೊಳ್ಳಬೇಕೆಂದು ಮಾಹಿತಿ ನೀಡಿದರು.

ದಂತ ವೈದ್ಯಾಧಿಕಾರಿ ಡಾ. ವಾಸ್ತವಿ ಹಾಗೂ ಮಂಪರು ತಜ್ಞೆ ಡಾ. ಸ್ಮಿತಾ, ಶುಶ್ರೂಷಣಾಧಿಕಾರಿ ಹರಿಣಾಕ್ಷಿ ಹಾಗೂ ಐಸಿಟಿಸಿ ಪ್ರಯೋಗಶಾಲಾ ತಂತ್ರಜ್ಞರಾದ ಗೌರಮ್ಮ, ಪ್ರಕಾಶ್, ಚಂದ್ರಶೇಖರ್, ಉಮೇಶ್ ಶುಶ್ರೂಷಕಿ ಲಲಿತ ಇತರರಿದ್ದರು.

# ಸರ್ವೆ ಮುಗಿಯುವ ವರೆಗೆ ತೆರವು ಮಾಡಬೇಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಲೆನಾಡು ಭಾಗದ ಸೆಕ್ಷನ್-4ಗೆ ಸಂಬಂಧಿಸಿ ಜಂಟಿ ಸರ್ವೆ ಕಾರ್ಯ ನಡೆಯುವವರೆಗೂ ಯಾವುದೇ ರೀತಿಯ ತೆರವು ಕಾರ್ಯ ನಡೆಸದಂತೆ ಒತ್ತಾಯಿಸಿ ಕರ್ನಾಟಕ ಬೆಳಗಾರರ ಒಕ್ಕೂಟ, ಜಿಲ್ಲಾ ಪ್ಲಾಂಟರ್ಸ್ ಸಂಘದ ನಿಯೋಗ ಸಿಸಿಎಫ್ ಏಡುಕೊಂಡಲು ಹಾಗು ಡಿಸಿಎಫ್ ಸೌರಭ್ ಕುಮಾರ್ ಅವರಿಗೆ ಮನವಿ ಸಲ್ಲಿಸಿತು.

ನಗರದ ಅರಣ್ಯ ಭವನದಲ್ಲಿ ಅಧಿಕಾರಿಗಳನ್ನು ಭೇಟಿ ಮಾಡಿದ ಬೆಳೆಗಾರರ ಸಂಘದ ಪದಾಧಿಕಾರಿಗಳು, ಸೆಕ್ಷನ್-4ಗೆ ಒಳ ಪಡುವ ಭೂ ಪ್ರದೇಶವನ್ನು ಸರ್ವೆ ಕಾರ್ಯ ನಡೆಸುವಾಗ ಸುತ್ತೋಲೆಯಲ್ಲಿರುವಂತೆ



ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಪದಾಧಿಕಾರಿಗಳು, ಸಕಲೇಶಪುರ ತಾಲ್ಲೂಕಿನ ಮಲೆನಾಡಿನ ಭಾಗಗಳಲ್ಲಿ ಸೆಕ್ಷನ್-4 ಅಧಿಸೂಚನೆ ಹಾಗೂ ಡಿಮ್ಡ್ ಅರಣ್ಯಗಳ ಘೋಷಣೆಯಿಂದ ಈ ಭಾಗದ ರೈತರು, ಜನಸಾಮಾನ್ಯರಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಗಿದೆ. ಈ ಹಿಂದೆ ಅರಣ್ಯ ಸಚಿವರು, ಕಂದಾಯ ಸಚಿವರು ಹಾಗೂ ಇಂಧನ ಸಚಿವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಿರುವಂತೆ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗಳ ಜಂಟಿ ಸಹಭಾಗಿತ್ವದಲ್ಲಿ ಸರ್ವೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದರು. ಅದರಂತೆ ಜಂಟಿ ಸರ್ವೆ ನಡೆಸುವಂತೆ ಹಾಗೂ ಅಲ್ಲಿವರೆಗೂ ಯಾವುದೇ ಕ್ರಮ ವಹಿಸದಂತೆ ಒತ್ತಾಯಿಸಿದರು.

ಕರ್ನಾಟಕ ಬೆಳಗಾರರ ಒಕ್ಕೂಟದ ಉಪಾಧ್ಯಕ್ಷ ಬಿ.ಎಂ.ನಾಗರಾಜ್, ಪ್ರಧಾನ ಕಾರ್ಯದರ್ಶಿ ಟಿ.ಪಿ ಸುರೇಂದ್ರ, ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ಎ.ಎಸ್.ಪರಮೇಶ್, ಗೌರವ ಕಾರ್ಯದರ್ಶಿ ಕೆ.ಬಿ.ಲೋಹಿತ್, ಕೆಜಿಎಫ್ ಸಂಘಟನಾ ಕಾರ್ಯದರ್ಶಿ ಬಿ.ಜಿ.ಯತೀಶ್, ಹೆಚ್‌ಡಿಪಿಎ ನಿರ್ದೇಶಕ ಡಿ.ಎಸ್.ಲೋಕೇಶ್, ಯಶಳೂರು ಹೋಬಳಿ ಬೆಳಗಾರರ ಸಂಘದ ಅಧ್ಯಕ್ಷ ಕೆ.ಬಿ. ಗಂಗಾಧರ್ ಹಾಜರಿದ್ದರು.

# ತೆಂಗಿನ ಮರಕ್ಕೆ ಕೀಟಬಾಧೆ ನಿರ್ವಹಣೆ ಕಾರ್ಯಾಗಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾರೆಕೆರೆ ಕೃಷಿ ಮಹಾವಿದ್ಯಾಲಯ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ದುದ್ದ ಹೋಬಳಿ ಹಾರನಹಳ್ಳಿಯಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ತೆಂಗಿನಕಾಯಿ ಉತ್ಪಾದನಾ ತಂತ್ರಜ್ಞಾನ ಹಾಗು ಕೀಟ-ರೋಗ ನಿರ್ವಹಣೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಮಹಾವಿದ್ಯಾಲಯದ ತೋಟಗಾರಿಕೆ ವಿಭಾಗ ಸಹ ಪ್ರಾಧ್ಯಾಪಕ ಡಾ. ಕಿರಣ್ ಸಾಗರ್ ಮಾತನಾಡಿ, ತೆಂಗಿನಕಾಯಿ ಬೆಳೆಗಾಗಿ ಅನುಸರಿಸಬೇಕಾದ ಕ್ರಮಗಳ ಮಾಹಿತಿ ನೀಡಿದರು. ಉತ್ತಮ ತಳಿಗಳ ಆಯ್ಕೆ, ಸರಿಯಾದ ಅಂತರದಲ್ಲಿ ನೆಡುವುದು, ಸಮರ್ಪಕ ನೀರಾವರಿ, ಗೊಬ್ಬರ ನಿರ್ವಹಣೆ ಮತ್ತು ಮಣ್ಣಿನ ಆರೋಗ್ಯ ಕಾಪಾಡುವ ಕ್ರಮಗಳ ಕುರಿತು ಜಾಗೃತಿ ಮೂಡಿಸಿದರು.

# ಪೌರ ಕಾರ್ಮಿಕ ಹೃದಯಾಘಾತದಿಂದ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಶ್ರವಣಬೆಳಗೊಳ ಗ್ರಾಮ ಪಂಚಾಯಿತಿ ಪೌರ ಕಾರ್ಮಿಕ ನಾಗಭೂ?ಣ್ (52) ಶುಕ್ರವಾರ ಬೆಳಿಗ್ಗೆ ಕರ್ತವ್ಯದಲ್ಲಿದ್ದಾಗ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಸುಮಾರು 25 ವರ್ಷಗಳಿಂದ ಶ್ರವಣಬೆಳಗೊಳ ಗ್ರಾಮ ಪಂಚಾಯಿತಿಯಲ್ಲಿ ಪೌರ ಕಾರ್ಮಿಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ನಾಗಭೂ?ಣ್ ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ಪಟ್ಟಣದ ವಿಂಧ್ಯಗಿರಿ ಬೆಟ್ಟದ ಮಹಾದ್ವಾರದ ಬಳಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದಾಗ ಏಕಾಏಕಿ ಕುಸಿದು ಬಿದ್ದಿದ್ದು ಸ್ಥಳದಲ್ಲೇ



ಸಾವನ್ನಪ್ಪಿದ್ದಾರೆ.

ಸ್ಥಳಕ್ಕೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹರೀಶ್ ಭೇಟಿ ನೀಡಿ, ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ಹಾಗೂ ಕುಟುಂಬದ ಸದಸ್ಯರೊಬ್ಬರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮ ಬಾಲಕೃ?, ಗ್ರಾಮ ಪಂಚಾಯಿತಿ ಅಧ್ಯಕ್ಷ ಅಫ್ತಾಬ್ ಪಾ?ಾ, ಉಪಾಧ್ಯಕ್ಷೆ ಕಾವ್ಯ ಕಿರಣ್, ಮಾಜಿ ಅಧ್ಯಕ್ಷರಾದ ಎಸ್. ಎಂ. ಲಕ್ಷ್ಮ್ರಣ್, ಎಸ್.ಟಿ. ಮಹೇಶ್, ಶರತ್ ಕುಮಾರ್, ಬಾಹುಬಲಿ, ರವಿ ನಂಜಪ್ಪ, ಎಸ್.ಆರ್. ಲೋಕೇಶ್, ಲತಾ ರಮೇಶ್, ಅನುರಾಧ ಲೋಹಿತ್, ಸದಸ್ಯ ಎನ್.ಆರ್.ವಾಸು, ಸಂಜಿತ ರೂಪೇಶ್ ಸಂತಾಪ ಸೂಚಿಸಿದರು.

# ವಿದ್ಯಾರ್ಥಿಗಳು ದುಶ್ಚಟಕ್ಕೆ ದಾಸರಾಗಬೇಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ವಿದ್ಯಾರ್ಥಿಗಳು ದುಶ್ಚಟಕ್ಕೆ ದಾಸರಾಗದೆ ಸಜ್ಜನರ ಸಹವಾಸ, ಓದು ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಸತ್ಪ್ರಜೆಗಳಾಗಿ ದೇಶಕ್ಕೆ ಕೊಡುಗೆಯಾಗಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಸಲಹೆ ನೀಡಿದರು.

ತಾಲ್ಲೂಕಿನ ಹಗರೆ ಸಮೀಪದ ಮಾದೀಹಳ್ಳಿ ಗ್ರಾಮದಲ್ಲಿ ಹಾರನಹಳ್ಳಿ ರಾಮಸ್ವಾಮಿ ಉನ್ನತ ಶಿಕ್ಷಣ ಸಂಸ್ಥೆಯಿಂದ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಕಾನೂನು ಪಾಲಿಸಬೇಕು. ದುಶ್ಚಟಕ್ಕೆ ದಾಸರಾಗಿ ಭವಿ?ೃ ಹಾಳು ಮಾಡಿಕೊಳ್ಳಬಾರದು ಎಂದರು.

ಮನೆ ಬಾಗಿಲಿಗೆ ಸರ್ಕಾರಿ ಸೇವೆಗಳನ್ನು ತಲುಪಿಸುವ ಕೆಲಸ ಇತ್ತೀಚೆಗೆ ಆಗುತ್ತಿದೆ. ಗ್ರಾಮಗಳ ಸ್ವಚ್ಛತೆ, ಅಧ್ಯಯನ ಕೂಡ ರಾಷ್ಟ್ರೀಯ ಸೇವಾ ಯೋಜನೆಯ ಒಂದು ಭಾಗ. ರೈತರು ಹಾಗು ಗ್ರಾಮೀಣ ಜನರು ಇಂತಹ ಕಾರ್ಯಗಳಲ್ಲಿ ಹೆಚ್ಚಾಗಿ ತೊಡಗಬೇಕೆಂದರು.

# ವಾಲ್ಮೀಕಿ ನಾಯಕ ಮಹಾಸಭಾ ಕಚೇರಿ ಉದ್ಘಾಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಯಾವುದೇ ಒಂದು ಸಮುದಾಯ ಆರ್ಥಿಕ, ಸಾಮಾಜಿಕ ಹಾಗು ರಾಜಕೀಯವಾಗಿ ಪ್ರಾತಿನಿಧ್ಯ ಪಡೆಯಬೇಕೆಂದರೆ ಸಂಘಟಿತ ಹೋರಾಟ ಮುಖ್ಯವೆಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಯುವ ಘಟಕದ ಜಿಲ್ಲಾಧ್ಯಕ್ಷ ಎನ್.ಟಿ. ಶ್ರೀನಿವಾಸ್ ಹೇಳಿದರು.

ಇಲ್ಲಿನ ಜಯನಗರದ ಭಗತ್‌ಸಿಂಗ್ ರಸ್ತೆಯಲ್ಲಿ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು,

ಇಂದು ಸ್ವಯಂ ಘೋಷಿತ ಅಧ್ಯಕ್ಷರ ಕಾರುಬಾರು ಹೆಚ್ಚಾಗಿದೆ. ಅಂಥವರೂ ಸಮಾಜಮುಖಿ ಕೆಲಸದಲ್ಲಿ ತೊಡಗಿದರೆ ನಮ್ಮ ತಕರಾರಿಲ್ಲ. ಆದರೆ ವೈಯಕ್ತಿಕ ಲಾಭಕ್ಕಾಗಿ ಸಮುದಾಯದ ಹೆಸರು ದುರುಪಯೋಗ ಆಗಬಾರದು ಎಂದರು.



ಗೌರವಾಧ್ಯಕ್ಷ ಹನುಮಪ್ಪ ಮಾತನಾಡಿ, ಸಂಘದಲ್ಲಿ ರಾಜಕೀಯ ಬೆರೆಸಬಾರದು. ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗುವ ಮೂಲಕ ಸಮಾಜಕ್ಕೆ ಅನುಕೂಲ ಮಾಡಿ ಎಂದರು.

ರಾಜ್ಯ ಉಪಾಧ್ಯಕ್ಷ ರವಿಕುಮಾರ್ ಅವರು ಮಾತನಾಡಿ, ನಾನು ಅರಸೀಕೆರೆ ವಾಲ್ಮೀಕಿ ನಾಯಕರ ಸಂಘದ ನಿರ್ದೇಶಕನಾಗಲು ಪ್ರಯತ್ನಿಸಿದ್ದೆ. ಪರಿಶ್ರಮ ಹಾಗೂ ಹೋರಾಟದ ಮೂಲಕ ಜಿಲ್ಲಾಧ್ಯಕ್ಷ ಸ್ಥಾನ ಅಲಂಕರಿಸಿದೆ. ನನ್ನ ಅವಧಿಯಲ್ಲಿ ಯಾವ ತಪ್ಪು ಮಾಡಿಲ್ಲ. ಶ್ರಮವಹಿಸಿ ಸ್ವಂತ ಹಣ ಖರ್ಚು ಮಾಡಿ ಸಂಘಟನೆ ಮಾಡಿದ್ದೇನೆ ಎಂದು ತಿಳಿಸಿದರು.

ಸಮುದಾಯದ ಜಯಣ್ಣ, ದೊಡ್ಡ ರಂಗಯ್ಯ, ಕೃಷ್ಣನಾಯಕ, ಜಯಣ್ಣ, ಡಾ. ಬಿ.ಆರ್. ಅಂಬೇಡ್ಕರ್ ಬ್ರಿಗೇಡ್‌ನ ರಾಜೇಶ್ ಮತ್ತಿತರರಿದ್ದರು.

# ಕ್ರಿಕೆಟ್: ಸ್ಕಾಲರ್ಸ್ ಶಾಲೆಗೆ ತೃತೀಯ ಸ್ಥಾನ

ಹಾಸನ: ಬೆಂಗಳೂರಿನ ಗೋಪಾಲನ್ ಅಂತಾರಾಷ್ಟ್ರೀಯ ಶಾಲಾ ಮೈದಾನದಲ್ಲಿ ನಡೆದ ಸಿಐಎಸ್ಸಿಇ 14 ವರ್ಷದೊಳಗಿನವರ ಕ್ರಿಕೆಟ್ ಪಂದ್ಯಾವಳಿಯಲ್ಲಿ ನಗರದ ಸ್ಕಾಲರ್ಸ್ ಶಾಲೆಯ ತಂಡ ಮೂರನೇ ಸ್ಥಾನ ಪಡೆದಿದೆ.ವಲಯ 8ರ ಪ್ರತಿನಿಧಿ ತಂಡವಾಗಿ ಪಾಲ್ಗೊಂಡ ಶಾಲೆಯ ವಿದ್ಯಾರ್ಥಿಗಳು ಕಠಿಣ ಪರಿಶ್ರಮ, ಶಿಸ್ತು ಮತ್ತು ಕ್ರೀಡಾ ಕೌಶಲ ಪ್ರದರ್ಶಿಸಿದರು. ಶಾಲೆಯ ಸಂಸ್ಥಾಪಕ ಹೆಚ್.ಎನ್. ಚಂದ್ರಶೇಖರ್ ಹಾಗೂ ಕಾರ್ಯದರ್ಶಿ ಮಮತಾ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.



# ಇತಿಹಾಸದಲ್ಲಿ ಈ ದಿನ

## ಆಗಸ್ಟ್-23

1305 ಸ್ಕಾಟ್ಲ್ಯಾಂಡ್ ದೇಶಭಕ್ತ ನಾಯಕ ವಿಲಿಯಂ ವಾಲೆಸ್ ಅವರನ್ನು ಲಂಡನ್‌ನಲ್ಲಿ ಮರಣದಂಡನೆಗೊಳಿಸಲಾಯಿತು.

1541: ಜಾಕ್ ಕಾರ್ಟಿಯರ್ ಮೂರನೇ ಸಮುದ್ರಯಾನ ವೇಳೆ ಕಾನಡಾದಲ್ಲಿ ಲಾರೆನ್ಸ್ ನದಿ ತಲುಪಿದರು.

1839: ಹಾಂಗ್ ಕಾಂಗ್ ದ್ವೀಪವನ್ನು ಬ್ರಿಟಿಷ್ ಸಾಮ್ರಾಜ್ಯ ಕಬಳಿಸಿತು.

1939: ಜರ್ಮನಿ ಮತ್ತು ಸೋವಿಯತ್ ಯೂನಿಯನ್ ನಡುವಿನ ಮೋಲೊಟೋವ್-ರಿಬೆಂಟ್ರೋಪ್ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಪರಿಣಾಮ ಎರಡನೇ ವಿಶ್ವಯುದ್ಧಕ್ಕೆ ನಾಂದಿ ಬಿದ್ದಿತು.

1947: ಡಾ. ಬಿ.ಆರ್. ಅಂಬೇಡ್ಕರ್ ಭಾರತದ ಕಾನೂನು ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡರು.

1966: ಚಂದ್ರಯಾನಕ್ಕಾಗಿ ಸೋವಿಯತ್ ಯೂನಿಯನ್ ಲೂನಾ 11 ಬಾಹ್ಯಾಕಾಶ ನೌಕೆಯನ್ನು ಉಡಾಯಿಸಿತು.

1990: ಅರ್ಮೇನಿಯಾ ಸೋವಿಯತ್ ಯೂನಿಯನ್‌ನಿಂದ ಸ್ವಾತಂತ್ರ್ಯ ಘೋಷಿಸಿತು.

2005: ಇಸ್ರೇಲ್ ಗಾಜಾ ಪಟ್ಟಿಯಿಂದ ತನ್ನ ಸೇನೆ ಮತ್ತು ವಸಾಹತುಗಳನ್ನು ಹಿಂತೆಗೆದುಕೊಂಡಿತು.

### ಜನನ

1754: ಲೂಯಿಸ್ 16ನೇ ಫ್ರೆಂಚ್ ಅರಸು

1910: ಜ್ಯೂಸೆಪ್ಪಿ ಮೆಜ್ಜಾ, ಇಟಲಿಯ ಪ್ರಸಿದ್ಧ ಫುಟ್‌ಬಾಲ್ ಆಟಗಾರ

1912: ಜೀನ್ ಕೆಲ್ಲಿ, ಅಮೆರಿಕಾದ ನಟ, ಗಾಯಕ, ನೃತ್ಯಗಾರ ಮತ್ತು ಚಲನಚಿತ್ರ ನಿರ್ದೇಶಕ

1926: ಕ್ಲಿಫ್ ಕುಕ್, ನ್ಯೂಜಿಲ್ಯಾಂಡ್ ಕ್ರಿಕೆಟಿಗ

1931 ಬಾರ್ಬರಾ ಈಡನ್, ಅಮೆರಿಕಾದ ನಟಿ

1978 ಕೋಬೆ ಬ್ರಯಾಂಟ್, ಅಮೆರಿಕಾದ ಬ್ಯಾಸ್ಕೆಟ್ಬಾಲ್ ಪಟು

### ಮರಣ

1305 ವಿಲಿಯಂ ವಾಲೆಸ್, ಸ್ಕಾಟ್ಲ್ಯಾಂಡ್ ದೇಶಭಕ್ತ ಮತ್ತು ಹೋರಾಟಗಾರ

1926 ರೂಡಾಲ್ಫ್ ವಾಲೆಂಟಿನೋ, ಇಟಾಲಿಯನ್ ಮೂಲದ ಅಮೇರಿಕಾದ ಮೌನ ಚಿತ್ರನಟ

1944 ಹೆನ್ರಿ ಡೈಟನ್, ಅಮೇರಿಕಾದ ಉದ್ಯಮಿ

1989 ಉಲ್ಫ್ ಸ್ಯಾಂಡ್ಬರ್ಗ್, ಸ್ವೀಡನ್ ಸಂಗೀತ ನಿರ್ದೇಶಕ

2012: ಜಾರ್ಜ್ ಬ್ಲೇಕ್, ಸೋವಿಯತ್ ಯೂನಿಯನ್‌ಗೆ ಕೆಲಸ ಮಾಡಿದ ಬ್ರಿಟಿಷ್ ಗುಪ್ತಚರ

# ಪ್ಯಾರಾಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಕ್ಕೆ ಬೇಡಿಕೆ

## 3 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆ | ಬೆಳೆ ಉಳಿಸಿಕೊಳ್ಳಲು ಕೀಟಗಳಿಗೆ ಮೊರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿರುವ ತೆಂಗಿಗೆ ತಗುಲುತ್ತಿರುವ ಕಪ್ಪು ತಲೆ ಹುಳು ಸೇರಿ ವಿವಿಧ ರೋಗಬಾಧೆಯಿಂದ ಮರಗಳನ್ನು ರಕ್ಷಿಸಿಕೊಳ್ಳಲು ಜಿಲ್ಲೆಯ ಅರಸೀಕೆರೆ ಹಾಗೂ ಹೊಳೆನರಸೀಪುರದಲ್ಲಿ ಪ್ಯಾರಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಗಳ ಉನ್ನತೀಕರಣಕ್ಕೆ ತೋಟಗಾರಿಕೆ ಇಲಾಖೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಈ ಬಾರಿ ತೆಂಗಿಗೆ ಅತ್ಯಧಿಕ ಬೆಲೆ ನಿಗದಿಯಾಗಿದೆಯಾದರೂ ವಿವಿಧ ರೋಗಗಳ ಹಾವಳಿಯಿಂದ ಬೆಳೆಗಾರರು ಕಂಗಾಲಾಗಿದ್ದಾರೆ. ದತ್ತಾಂಶದ ಪ್ರಕಾರ ಅರಸೀಕೆರೆ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 1.18 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚು ಪ್ರದೇಶದ ತೆಂಗು ಕೀಟ ಮತ್ತು ರೋಗ ಬಾಧೆಗೆ ತುತ್ತಾಗಿದೆ. ರುಗೋಸ್ ಬಿಳಿ ನೊಣ ಬಾಧೆಯಿಂದ 82 ಸಾವಿರ ಹೆಕ್ಟೇರ್, ಕಪ್ಪು ತಲೆ ಹುಳುಗಳು ಹರಡಿ 10 ಸಾವಿರ ಹೆಕ್ಟೇರ್, ಕಾಂಡ ಸೋರುವಿಕೆಯಿಂದ 15 ಸಾವಿರ ಹೆಕ್ಟೇರ್‌ನಲ್ಲಿ ಬೆಳೆದಿದ್ದ ತೆಂಗು ನೆಲ ಕಚ್ಚಿದೆ. ಇದರಿಂದ ತೆಂಗು ಬೆಳೆಯನ್ನೇ ನಂಬಿದ್ದ ಸಾವಿರಾರು ಬೆಳೆಗಾರರು ಆರ್ಥಿಕ ನಷ್ಟಕ್ಕೆ ಸಿಲುಕಿದ್ದಾರೆ. ಈ ಸಮಸ್ಯೆಯಿಂದ ಶಾಶ್ವತ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಪ್ರಸ್ತಾವನೆಯಲ್ಲಿ ಮನವಿ ಮಾಡಿಕೊಳ್ಳಲಾಗಿದೆ.

### ಪ್ಯಾರಾಸಿಟಾಯ್ಡ್ ಎಂದರೇನು

ಪ್ಯಾರಸಿಟಾಯ್ಡ್ ಎಂದರೆ ಒಂದು ವಿಶೇಷ ರೀತಿಯ ಜೀವಿ (ಸಾಮಾನ್ಯವಾಗಿ ಕೀಟ) ಇದು ತನ್ನ ಜೀವನ ಚಕ್ರದಲ್ಲಿ ಮತ್ತೊಂದು ಜೀವಿಯ (ಆತಿಥೇಯ) ದೇಹವನ್ನು ಬಳಸಿಕೊಂಡು ಬೆಳೆದರೂ, ಕೊನೆಗೆ ಆತಿಥೇಯನನ್ನು ಕೊಂದುಹಾಕುತ್ತದೆ. ಇವು ಸಾಮಾನ್ಯ ಪರೋಪ ಜೀವಿಗಿಳಿಗಿಂತ ಭಿನ್ನ. ಪರೋಪ ಜೀವಿಗಳು ಆತಿಥೇಯನನ್ನು ಕೊಲ್ಲದೇ ದೀರ್ಘಕಾಲ ಬದುಕುತ್ತವೆ. ಆದರೆ ಪ್ಯಾರಸಿಟಾಯ್ಡ್‌ಗಳು ಆತಿಥೇಯನನ್ನು ಕೊನೆಗೆ ನಾಶಮಾಡುತ್ತವೆ. ತೆಂಗು ಬೆಳೆಗೆ ತಗುಲುವ ಕಪ್ಪುತಲೆ ಹುಳು ಸೇರಿ ವಿವಿಧ ಕೀಟಗಳನ್ನು ನಾಶಮಾಡಬಲ್ಲ ಸಾಮರ್ಥ್ಯ ಪ್ಯಾರಾಸಿಟಾಯ್ಡ್‌ಗೆ ಇದ್ದು ಅದು ಮರ ರಕ್ಷಣೆಗೆ ನೆರವಾಗುತ್ತದೆ.



> ಅರಸೀಕೆರೆ ಹಾಗೂ ಹೊಳೆನರಸೀಪುರದಲ್ಲಿ ಪ್ಯಾರಾಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಗಳ ವಿಸ್ತರಿಸುವಂತೆ 3 ಕೋಟಿ ರೂ. ವೆಚ್ಚದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಜನಪ್ರತಿನಿಧಿಗಳು ಸಂಬಂಧಪಟ್ಟ ಅಧಿಕಾರಿ ಮತ್ತು ಸಚಿವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.
>
> **- ಯೋಗೇಶ್,**
> **ತೋಟಗಾರಿಕೆ ಇಲಾಖೆ ಉಪನಿರ್ದೇಶಕ**

### 3 ಕೋಟಿ ರೂ. ವೆಚ್ಚದ ಯೋಜನೆ

ಅರಸೀಕೆರೆ ಮತ್ತು ಹೊಳೆನರಸೀಪುರದಲ್ಲಿ ಪ್ಯಾರಾಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಗಳಿದ್ದು ಎರಡೂ ಕೇಂದ್ರಗಳಿಂದ ವಾರ್ಷಿಕ ಕೇವಲ 25 ಲಕ್ಷ ಪ್ಯಾರಾಸಿಟಾಯ್ಡ್ ಕೀಟಗಳ ಉತ್ಪಾದನೆ ಸಾಧ್ಯವಾಗುತ್ತಿದೆ. ಆದರೆ ಪ್ರಸ್ತುತ 1.50 ಕೋಟಿಯಷ್ಟು ಪ್ಯಾರಾಸಿಟಾಯ್ಡ್‌ಗಳ ಅವಶ್ಯಕತೆಯಿದ್ದು ಬೇಡಿಕೆಗೆ ತಕ್ಕಷ್ಟು ಪೂರೈಕೆಗಾಗಿ ಉತ್ಪಾದನೆ ಹೆಚ್ಚಿಸಿಕೊಳ್ಳಬೇಕಿದೆ. ಅದಕ್ಕಾಗಿ ಮೂಲಸೌಕರ್ಯ, ಸುಸಜ್ಜಿತ ಕಟ್ಟಡ, ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕಿದ್ದು ಪ್ರತಿ ಕೇಂದ್ರಕ್ಕೆ ತಲಾ 1.50 ಕೋಟಿ ರೂ.ನಂತೆ 3 ಕೋಟಿ ರೂ. ಅನುದಾನಕ್ಕಾಗಿ ಬೇಡಿಕೆ ಸಲ್ಲಿಸಲಾಗಿದೆ.

### ಕೃಷಿಯಲ್ಲಿ ಉಪಯೋಗ

ರಾಸಾಯನಿಕ ಕೀಟನಾಶಕ ಬಳಸದೇ ಹಾನಿಕಾರಕ ಕೀಟಗಳನ್ನು ಸ್ವಾಭಾವಿಕವಾಗಿ ನಿಯಂತ್ರಿಸಲು ಪ್ಯಾರಸಿಟಾಯ್ಡ್‌ಗಳನ್ನು ಜಮೀನಿಗೆ ಬಿಡಲಾಗುತ್ತದೆ. ತೆಂಗು ಜೊತೆಗೆ, ಕಬ್ಬು, ಕಾಫಿ, ಹತ್ತಿ ಮುಂತಾದ ಬೆಳೆಗಳಲ್ಲಿ ಕೀಟ ನಿಯಂತ್ರಣಕ್ಕೆ ವ್ಯಾಪಕವಾಗಿ ಅದನ್ನು ಬಳಸಲಾಗುತ್ತಿದೆ. ಪ್ಯಾರಸಿಟಾಯ್ಡ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಇಳುವರಿ ಕಾಣಬಹುದು. ರಾಸಾಯನಿಕ ಕೀಟನಾಶಕಗಳ ಅವಲಂಬನೆಯೂ ಕಡಿಮೆಯಾಗುತ್ತದೆ. ಸಾಂಪ್ರದಾಯಿಕ ಹಾಗು ಪ್ರಮುಖ ವಾಣಿಜ್ಯ ಬೆಳೆಯಾದ ತೆಂಗು ಉಳಿಸಿಕೊಳ್ಳಬೇಕೆಂದರೆ ಜೈವಿಕ ನಿಯಂತ್ರಣ ಪ್ರಯೋಗಾಲಯದ ಅವಶ್ಯಕತೆ ಹೆಚ್ಚಿದ್ದು ಸರ್ಕಾರಗಳು ಹೇಗೆ ಸ್ಪಂದಿಸುತ್ತವೆಂಬುದನ್ನು ಕಾದು ನೋಡಬೇಕಿದೆ.

### ಎಲ್ಲಾ ಜಿಲ್ಲೆಗಳಲ್ಲೂ ವಿಸ್ತರಣೆ

ಪ್ರಮುಖ ಬೆಳೆಗಳನ್ನು ವಿವಿಧ ಕೀಟಬಾಧೆಯಿಂದ ರಕ್ಷಿಸಲು ಪ್ಯಾರಾಸಿಟಾಯ್ಡ್‌ಗಳಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಆಸಕ್ತಿ ತೋರಿದೆ. ಎಲ್ಲಾ ಜಿಲ್ಲೆಗಳಲ್ಲೂ ಪ್ಯಾರಾಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಕ್ಕೆ ಸೌಕರ್ಯ ಕಲ್ಪಿಸಲು ರಾಜ್ಯ ಸರ್ಕಾರವೂ ಚಿಂತನೆ ನಡೆಸಿದೆ. ತುಮಕೂರು ಹಾಗು ಹಾಸನದಲ್ಲಿ ಪ್ರಯೋಗಾಲಯ ವಿಸ್ತರಿಸಿ ನಂತರ ಇತರ ಜಿಲ್ಲೆಗಳಿಗೆ ಸೌಲಭ್ಯ ಕಲ್ಪಿಸುವ ಚಿಂತನೆ ನಡೆದಿದೆ. ಈ ಬಗ್ಗೆ ಶಾಸಕ ಹೆಚ್.ಪಿ. ಸ್ವರೂಪ್ ಅವರಿಂದ ರಾಜ್ಯ ಸರ್ಕಾರ ಹಾಗು ಸಂಸದ ಶ್ರೇಯಸ್ ಪಟೇಲ್ ಅವರಿಂದ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಕೆಯಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248